ದಿನಾಂಕ **: 29.01.2026** ರಂದು ಡಿಡಬ್ಲ್ಯೂ - 3 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಂ.ಸಿ.ಕೆ., ವಾದಿ ಪರ ವಕೀಲರಿಂದಃ

ನಾನು ಹವ್ಯಾಸಿ ಯಕ್ಷಗಾನ ಕಲಾವಿದ. 1 ನೇ ಪ್ರತಿವಾದಿ ಮತ್ತು ಶ್ರೀಧರ ಪಾಂಡೆಯವರ ಪರಿಚಯ ನಾನು ಸಣ್ಣ ಪ್ರಾಯದವನಾಗಿರುವಾಗಿನಿಂದಲೂ ಇರುತ್ತದೆ. ಶ್ರೀಧರ ಪಾಂಡಿಯವರ ಮರಣ ಸ್ಮರಣಾರ್ಥವಾಗಿ 1 ನೇ ಪ್ರತಿವಾದಿಯ ಕುಟುಂಬಸ್ಥರು ನನಗೆ ಪ್ರಶಸ್ತಿಯನ್ನು ನೀಡಿದ್ದಾರೆ ಎಂದರೆ ಸರಿ. ನಾನು ಕಾರ್ಕಳದ ಪಿ.ಎಲ್.ಡಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ 1 ನೇ ಪ್ರತಿವಾದಿಯ ಖಾತೆ ಇತ್ತು ಎಂದರೆ ಸರಿಯಲ್ಲ. ಅವರು ಸದರಿ ಬ್ಯಾಂಕ್ ನಲ್ಲಿ ಸಾಲವನ್ನು ಸುಮಾರು 2 ಬಾರಿ ಪಡೆದಿದ್ದರು. ಲೋನ್ ದಾಖಲೆಗಳಿಗೆ ಸಹಿ ಪಡೆಯಲು 1 ನೇ ಪ್ರತಿವಾದಿಯ ಕಚೇರಿಗೆ ಹೋಗುತ್ತಿದ್ದೆ ಎಂದರೆ ಸರಿ. ಮುಂದುವರಿದು ಬ್ಯಾಂಕ್ ನಲ್ಲಿ ಸಹಿ ಪಡೆಯುತ್ತಿದ್ದೆವು ಎಂದು ನುಡಿಯುತ್ತೇನೆ. ನಿಡಿ - 5(ಸಿ) ಯಲ್ಲಿರುವುದು ನನ್ನ ತಂದೆಯ ಹೆಸರು ಎಂದರೆ, ಅದು ಸಹಿಯಾಗಿರುತ್ತದೆ. ನಿಡಿ - 5 ರಲ್ಲಿ ನನ್ನ ತಂದೆಯ ಹೆಸರು ಇದೆ. ನಿಡಿ - 5 ರಲ್ಲಿ ಜೋಸೆಪ್ ಪಿಂಟೋ ರವರ ಹೆಸರು, ತಂದೆಯ ಹೆಸರು ಮತ್ತು ಅವರ ವಿಳಾಸ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಜೀನರಾಜ ಪಾಂಡಿಯವರ

ಹೆಸರು ನಿಡಿ - 5 ರಲ್ಲಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ - 5 ರಲ್ಲಿ ಜಿನ್ನಪ್ಪ ಹೆಗ್ಗಡೆ ಯವರ ಹೆಸರು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಜೀನರಾಜ ಪಾಂಡಿಯವರ ಸಹಿಗಳು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ - 5 ನ್ನು ಯಾರು, ಎಲ್ಲಿ, ಯಾವಾಗ ತಯಾರಿಸುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಡಿ - 5 ನ್ನು ನೋಡುವಾಗ ಸದರಿ ದಾಖಲೆಯು ಸುಮಾರು 5 – 6 ವರ್ಷಗಳ ಹಿಂದೆ ಮಾಡಲಾದಂತಹ ದಾಖಲೆ ಎಂದು ಕಂಡು ಬರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ತಂದೆ ಮೊದಲು ಕೃಷಿ ಮಾಡುತ್ತಿದ್ದು, ನಂತರ ಸಾಣೂರಿನಲ್ಲಿ ಹೋಟೇಲ್ ಉದ್ಯಮ ನಡೆಸುತ್ತಿದ್ದರು.

ನನ್ನ ತಂದೆ 1 ನೇ ಪ್ರತಿವಾದಿಯ ಕಚೇರಿಗೆ ಹೋಗುತ್ತಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಪರವಾಗಿ ವಕೀಲರಾದ 1 ನೇ ಪ್ರತಿವಾದಿಯು ಎಷ್ಟು ಪ್ರಕರಣಗಳನ್ನು ನಡೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದಿಃ02.10.1996 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯ ಸಹಿ ಇರುವ ಮೂಲ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನನ್ನ ತಂದೆಯ ಬ್ಯಾಂಕ್ ಖಾತೆಗಳು ಇದ್ದಿರಬಹುದು. ನನ್ನ ತಂದೆಯ ಸಹಿ ಇರುವಂತಹ ಮೂಲ ದಾಖಲೆಗಳನ್ನು ಹಾಜರುಪಡಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆಯ ಸಹಿ ಇರುತ್ತದೆ ಎಂದರೆ

ಇರಬಹುದು. ಅದನ್ನು ತರಿಸಲು ನನಗೆ ಅಭ್ಯಂತರವಿರುವುದಿಲ್ಲ. ನಾನು ಕಾರ್ಕಳದ ಬೋರ್ಡ್ ಹೈಸ್ಕೂಲ್ ನಲ್ಲಿ ಓದಿದ್ದೇನೆ. ಅದಕ್ಕೂ ಪೂರ್ವದಲ್ಲಿ ಸಾಣೂರಿನ ಸರಕಾರಿ ಶಾಲೆಯಲ್ಲಿ ಓದಿದ್ದೇನೆ. ನನ್ನ ತಂದೆ ಎಷ್ಟನೇ ತರಗತಿವರೆಗೆ ಓದಿದ್ದಾರೆ ಎಂದು ನನಗೆ ತಿಳಿದಿಲ್ಲ. ನನ್ನ ತಂದೆ ಸಹಿ ಹಾಕಿರುವುದನ್ನು ನಾನು ನೋಡಿದ್ದೇನೆ. ಕೊನೆಯ ಬಾರಿಗೆ ನಾನು ನನ್ನ ತಂದೆಯ ಸಹಿಯನ್ನು ಸುಮಾರು 1974 ಅಥವಾ 1975 ರಲ್ಲಿ ನೋಡಿರಬಹುದು. ನನ್ನ ತಂದೆ ಎಷ್ಟು ದಾಖಲೆಗಳಿಗೆ ಸಹಿ ಹಾಕಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಯಾವುದೇ ದಾಖಲೆಗಳಿಗೆ ಅಟೆಸ್ಟಿಂಗ್ ವಿಟ್ನೆಸ್ ಆಗಿ ಸಹಿಯನ್ನು ಹಾಕಿರುವುದಿಲ್ಲ. ನಿಡಿ - 5 ರಲ್ಲಿರುವುದು ನನ್ನ ತಂದೆಯ ಸಹಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ 30.10.1961 ರಂದು ಜನಿಸಿದ್ದೇನೆ. ನಾನು ಮತ್ತು 1 ನೇ ಪ್ರತಿವಾದಿ ಶಾಮೀಲಾಗಿ ನಿಡಿ - 5 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯವರು ನಿಡಿ - 5 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕುಮ್ಮಕ್ಕಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಡಿಡಬ್ಲ್ಯೂ 2 ರವರು 1 ನೇ ಪ್ರತಿವಾದಿಯ ಸಹಚರರು ಎಂದರೆ ಸರಿಯಲ್ಲ. ನಾವೆಲ್ಲಾ ಸೇರಿ 1 ನೇ ಪ್ರತಿವಾದಿಯವರ ಹೆಸರಿಗೆ ಸಾಕಷ್ಟು ವೀಲುನಾಮೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮೋಸದ ಕೆಲಸಗಳಿಗೆ ಪುಷ್ಟೀಕರಿಸಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀಮತಿ ಕೆ.ಎಸ್., 2 ರಿಂದ 4 ನೇ ಪ್ರತಿವಾದಿ ಪರ ವಕೀಲರಿಂದಃ

ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ನಾನು ಯಾವ ವಕೀಲರನ್ನು ಸಂಪರ್ಕಿಸಿರುವುದಿಲ್ಲ. ಸದರಿ ಸಮನ್ಸ್ ನಲ್ಲಿ ನಾನು ಯಾವುದರ ಬಗ್ಗೆ ಸಾಕ್ಷಿ ಹೇಳಬೇಕು ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ - 5 ರಲ್ಲಿ ಭೋಜರಾಜ ಹೆಗ್ಗಡೆಯವರ ಹೆಸರು ನಮೂದು ಇರುವ ಕಾರಣ, ಅದು ಅವರ ಸಹಿ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. 1950 ನೇ ಇಸವಿಯಿಂದ 1970 ರ ತನಕ ನನ್ನ ತಂದೆಯವರ ಸಹಿ ಇರುವಂತಹ ಯಾವ ದಾಖಲೆಗಳು ನನ್ನ ಬಳಿ ಇರುವುದಿಲ್ಲ.

ನಾನು ಹವ್ಯಾಸಿ ಯಕ್ಷಗಾನ ಕಲಾವಿದ. 1 ನೇ ಪ್ರತಿವಾದಿ ಮತ್ತು ಶ್ರೀಧರ ಪಾಂಡೆಯವರ ಪರಿಚಯ ನಾನು ಸಣ್ಣ ಪ್ರಾಯದವನಾಗಿರುವಾಗಿನಿಂದಲೂ ಇರುತ್ತದೆ. ಶ್ರೀಧರ ಪಾಂಡಿಯವರ ಮರಣ ಸ್ಮರಣಾರ್ಥವಾಗಿ 1 ನೇ ಪ್ರತಿವಾದಿಯ ಕುಟುಂಬಸ್ಥರು ನನಗೆ ಪ್ರಶಸ್ತಿಯನ್ನು ನೀಡಿದ್ದಾರೆ ಎಂದರೆ ಸರಿ. ನಾನು ಕಾರ್ಕಳದ ಪಿ.ಎಲ್.ಡಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ 1 ನೇ ಪ್ರತಿವಾದಿಯ ಖಾತೆ ಇತ್ತು ಎಂದರೆ ಸರಿಯಲ್ಲ. ಅವರು ಸದರಿ ಬ್ಯಾಂಕ್ ನಲ್ಲಿ ಸಾಲವನ್ನು ಸುಮಾರು 2 ಬಾರಿ ಪಡೆದಿದ್ದರು. ಲೋನ್ ದಾಖಲೆಗಳಿಗೆ ಸಹಿ ಪಡೆಯಲು 1 ನೇ ಪ್ರತಿವಾದಿಯ ಕಚೇರಿಗೆ ಹೋಗುತ್ತಿದ್ದೆ ಎಂದರೆ ಸರಿ.

ಮುಂದುವರಿದು ಬ್ಯಾಂಕ್ ನಲ್ಲಿ ಸಹಿ ಪಡೆಯುತ್ತಿದ್ದೆವು ಎಂದು ನುಡಿಯುತ್ತೇನೆ. ನಿಡಿ - 5(ಸಿ) ಯಲ್ಲಿರುವುದು ನನ್ನ ತಂದೆಯ ಹೆಸರು ಎಂದರೆ, ಅದು ಸಹಿಯಾಗಿರುತ್ತದೆ. ನಿಡಿ - 5 ರಲ್ಲಿ ನನ್ನ ತಂದೆಯ ಹೆಸರು ಇದೆ. ನಿಡಿ - 5 ರಲ್ಲಿ ಜೋಸೆಪ್ ಪಿಂಟೋ ರವರ ಹೆಸರು, ತಂದೆಯ ಹೆಸರು ಮತ್ತು ಅವರ ವಿಳಾಸ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಜೀನರಾಜ ಪಾಂಡಿಯವರ ಹೆಸರು ನಿಡಿ - 5 ರಲ್ಲಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ - 5 ರಲ್ಲಿ ಜಿನ್ನಪ್ಪ ಹೆಗ್ಗಡೆ ಯವರ ಹೆಸರು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಜಿನ್ನಪ್ಪ ಹೆಗ್ಗಡೆ ಮತ್ತು ಜೀನರಾಜ ಪಾಂಡಿಯವರ ಸಹಿಗಳು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ - 5 ನ್ನು ಯಾರು, ಎಲ್ಲಿ, ಯಾವಾಗ ತಯಾರಿಸುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಡಿ - 5 ನ್ನು ನೋಡುವಾಗ ಸದರಿ ದಾಖಲೆಯು ಸುಮಾರು 5 – 6 ವರ್ಷಗಳ ಹಿಂದೆ ಮಾಡಲಾದಂತಹ ದಾಖಲೆ ಎಂದು ಕಂಡು ಬರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ತಂದೆ ಮೊದಲು ಕೃಷಿ ಮಾಡುತ್ತಿದ್ದು, ನಂತರ ಸಾಣೂರಿನಲ್ಲಿ ಹೋಟೇಲ್ ಉದ್ಯಮ ನಡೆಸುತ್ತಿದ್ದರು.

ನಿಡಿ - 5 ರಲ್ಲಿರುವುದು ನನ್ನ ತಂದೆಯ ಸಹಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ 30.10.1961 ರಂದು ಜನಿಸಿದ್ದೇನೆ. ನಾನು ಮತ್ತು 1 ನೇ ಪ್ರತಿವಾದಿ ಶಾಮೀಲಾಗಿ ನಿಡಿ - 5 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ

ತಂದೆಯವರು ನಿಡಿ - 5 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕುಮ್ಮಕ್ಕಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಡಿಡಬ್ಲ್ಯೂ 2 ರವರು 1 ನೇ ಪ್ರತಿವಾದಿಯ ಸಹಚರರು ಎಂದರೆ ಸರಿಯಲ್ಲ. ನಾವೆಲ್ಲಾ ಸೇರಿ 1 ನೇ ಪ್ರತಿವಾದಿಯವರ ಹೆಸರಿಗೆ ಸಾಕಷ್ಟು ವೀಲುನಾಮೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮೋಸದ ಕೆಲಸಗಳಿಗೆ ಪುಷ್ಟೀಕರಿಸಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.